# <u>ಕರ್ನಾಟಕ ಲೋಕಾಯುಕ್ತ</u>

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–2520/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 03/03/2017

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ</u>

**ವಿಷಯ:** ಶ್ರೀ ಮೊಹಮ್ಮದ್ ಹನಿಫ್, ಉದಪುಡಿ ಗ್ರಾಮ ಮತ್ತು ಅಂಚೆ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಮೊಹಮ್ಮದ್ ಹನಿಫ್ ರವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಉದಪುಡಿ ಗ್ರಾಮದ ಸರ್ವೇ ನಂ.206/2ಪಿ ಜಮೀನು 11 ಎಕರೆ 25 ಗುಂಟೆ ಇದ್ದು, ಅದರಲ್ಲಿ 2 ರಿಂದ 2.50 ಎಕರೆ ಜಮೀನ್ನು ಇಂದಿರಾ ಆವಾಸ್ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಅಕ್ರಮವಾಗಿ ನಿರ್ಮಿಸಲಾಗಿರುತ್ತದೆ. ಇನ್ನುಳಿದಂತೆ ಖಾಲಿ ಜಾಗವಿರುತ್ತದೆ. ಸದರಿ ಉಳಿದ ಖಾಲಿ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ಗ್ರಾಮ ಪಂಚಾಯತಿ ಮತ್ತು ರಾಜಕೀಯದವರು ಶಾಮೀಲಾಗಿ ಸರ್ವೇ ನಂ.206/2ಪಿ ಎಂದು ಇದ್ದ ದಾಖಲೆಗಳನ್ನು ಗ್ರಾಮ ಪಂಚಾಯತಿ ವಿಪಿಸಿ ನಂಬರ್ ಎಂದು ನಂಬರ್ ನೀಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಜಮೀನನ್ನು ಅಕ್ರಮವಾಗಿ ದುರುಪಯೋಗಪಡಿಸಿಕೊಳ್ಳಲು ಕ್ರಮ ಜರುಗಿಸಿರುತ್ತಾರೆ. ಆದ್ದರಿಂದ, ಸದರಿ ಸರ್ವೇ ನಂಬರ್ 206/2ಪಿಯ ಜಮೀನು ಖಾಸಗಿಯವರ ಪಾಲಾಗಿರುತ್ತದೆ. ಆದ್ದರಿಂದ, ಈ ಅಕ್ರಮವನ್ನು ತಡೆಯಬೇಕೆಂದು ಮತ್ತು ಸರ್ಕಾರಿ ಜಮೀನು ಬೇರೆಯವರ ಪಾಲಾಗುವುದನ್ನು ತಡೆಯಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1, 3 ಮತ್ತು 4ನೇ ಎದುರುದಾರರುಗಳ ಆಕ್ಷೇಪಣೆಯನ್ನು ಪಡೆಯಲಾಗಿದ್ದು, 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 2ನೇ ಎದುರುದಾರರಿಗೆ ನೀಡಲಾಗಿದ್ದ ನೋಟೀಸ್ ಅವರಿಗೆ

ತಲುಪಿರುವ ಬಗ್ಗೆ ಸ್ವೀಕೃತಿಯನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗಿದೆ. ಆದ್ದರಿಂದ, 2ನೇ ಎದುರುದಾರರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ಉದಪುಡಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ 1998ರಲ್ಲಿ ಸೇವೆ ಸಲ್ಲಿಸುತ್ತಿದ್ದು, ಆಗ ಸರ್ವೇ ನಂಬರ್ 206/2ಪಿ ಖಾಲಿ ಜಾಗವಾಗಿತ್ತೆಂದು, ಆ ಜಾಗದಲ್ಲಿ ಸುಮಾರು ಮನೆಗಳನ್ನು ಕಟ್ಟಲಾಗಿರುತ್ತದೆ. ಹಾಗೆಯೇ ಶ್ರೀ ಸಿದ್ಧನಗೌಡ ಬಸನಗೌಡ ಪಾಟೀಲ್, ಶ್ರೀಮತಿ ಕಸ್ತೂರವ್ವ ಇವರ ಹೆಸರುಗಳನ್ನು ಸದರಿ ಜಾಗಕ್ಕೆ ಗ್ರಾಮ ಪಂಚಾಯತಿ ದಾಖಲೆಗಳಲ್ಲಿ ದಾಖಲು ಮಾಡಲು ಅರ್ಜಿ ಬಂದಿದ್ದು, ಸದರಿ ಅರ್ಜಿಗಳನ್ನು ಗ್ರಾಮಪಂಚಾಯತಿಯ ದಿ:10/08/1998 ರ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚೆಗೆ ಮಂಡಿಸಲಾಗಿತ್ತು. ಅರ್ಜಿದಾರರು ಸದರಿ ಜಾಗವನ್ನು ಅನುಭವಿಸಿಕೊಂಡು ಅವರೇ ವಹಿವಾಟು ಮಾಡುತ್ತ ಬಂದಿರುವುದಾಗಿ, ಇದಕ್ಕೆ ಯಾರದೇ ತಕರಾರು ಇಲ್ಲವೆಂದು, ಆದ್ದರಿಂದ, ಅವರ ಹೆಸರಿಗೆ ಪಂಚಾಯತಿ ದಾಖಲೆಗಳನ್ನು ದಾಖಲಿಸಲು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ. ಆ ರೀತಿ ಮಾಡಲು ಕಾನೂನಿನ ಅವಕಾಶ ಇಲ್ಲದ ಬಗ್ಗೆ ತಿಳಿಸಿದಾಗ್ಯೂ, ಸದರಿಯವರ ಹೆಸರಿಗೆ ದಾಖಲಿಸಲು ಗೊತ್ತುವಳಿ ಮೂಲಕ ಠರಾವು ಪಾಸ್ ಮಾಡಲಾಗಿರುತ್ತದೆ ಮತ್ತು ತಾನು ಈಗಾಗಲೇ 31/05/2013 ರಂದು ನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

4. 3ನೇ ಎದುರುದಾರರು ತಾನು ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಸರ್ವೇ ನಂ. 206/2ಪಿ ಜಮೀನಿನಲ್ಲಿ ಖಾಲಿ ಜಾಗವಿದ್ದು, ಆ ಜಾಗದಲ್ಲಿ ಸುಮಾರು ಮನೆಗಳನ್ನು ಕಟ್ಟಲಾಗಿರುತ್ತದೆ ಹಾಗೂ ಕೆಲವರ ಹೆಸರಿನಲ್ಲಿ ಖಾಲಿ ಜಾಗ ದಾಖಲು ಮಾಡಲಾಗಿರುವುದು ಕಂಡು ಬರುತ್ತದೆ. 2009 ರಲ್ಲಿ ಕೆಲವು ಅರ್ಜಿಗಳು ಖುಲ್ಲಾ ಜಾಗವನ್ನು ತಮ್ಮ ಹೆಸರಿಗೆ ದಾಖಲು ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ, ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಸದರಿ ಖುಲ್ಲಾ ಜಾಗವನ್ನು ಅರ್ಜಿದಾರರ ಹೆಸರಲ್ಲಿ ದಾಖಲಿಸಲು ಯಾವುದೇ ತಕರಾರು ಇಲ್ಲದೇ ಇದ್ದರಿಂದ, ಅವರ ಹೆಸರಿಗೆ ಡೈರಿ ಮಾಡಿದ ನಂತರ ವಿಪಿಸಿ ನಂಬರ್ ನೀಡಲಾಗಿರುತ್ತದೆ. ಆದ್ದರಿಂದ, ಗ್ರಾಮ ಸಭೆಯಲ್ಲಿ ಕಾನೂನಿನಂತೆ ಕ್ರಮ ಕೈಗೊಂಡು ಅರ್ಜಿದಾರರ ಹೆಸರಿಗೆ ಖಾಲಿ ಜಾಗವನ್ನು ನೋಂದಾಯಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. 4ನೇ ಎದುರುದಾರರು ಸಹ 1 ಮತ್ತು 3ನೇ ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಅನುಸರಿಸಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

6. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಗ್ರಾಮ ಪಂಚಾಯತಿಯ ಹಕ್ಕುಗಳ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಕ್ರ.ಸಂ.298 ರಲ್ಲಿ ಹಕ್ಕಿನ ಪ್ರಕಾರ ಎಂದು ಇರುವ ಕಾಲಂ ನಲ್ಲಿ ಸರ್ವೇ ನಂ.206/2ಪಿ ಯ 11 ಎಕರೆ 25 ಗುಂಟೆ ಜಮೀನನ್ನು ಸರ್ಕಾರ ಎಂದು ದಾಖಲು ಮಾಡಿರುವುದು ಕಂಡು ಬರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ. ಹಾಗೆಯೇ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಆರ್‌ಟಿಸಿ ಪ್ರತಿಯಲ್ಲಿ 11 ಎಕರೆ 25 ಗುಂಟೆ ಜಮೀನನ್ನು ಕಾಲಂ ನಂ.9 ರಲ್ಲಿ ಸರ್ಕಾರ ಎಂದು ತೋರಿಸಿರುವುದು ಕಂಡು ಬರುತ್ತದೆ. ಇದರಿಂದ ಸದರಿ ಜಮೀನು ಸರ್ಕಾರಕ್ಕೆ ಸೇರಿದ್ದೆಂದು ಸ್ಪಷ್ಟ ಪಡುತ್ತದೆ. ಹೀಗಿರುವಲ್ಲಿ ಸದರಿ ಜಮೀನನ್ನು ಬೇರೆಯವರ ಹೆಸರಿಗೆ ವರ್ಗಾಯಿಸಲು ಗ್ರಾಮ ಪಂಚಾಯತಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಇದಕ್ಕೆ ಸರ್ಕಾರದ ಅನುಮತಿ ಬೇಕಾಗಿರುತ್ತದೆ. ಸದರಿ ಜಮೀನು ಗ್ರಾಮ ಪಂಚಾಯತಿಗೆ ಸೇರಿದ್ದಾಗಿರುವುದಿಲ್ಲ. ಆದ್ದರಿಂದ, ಸದರಿ ಜಮೀನನ್ನು ಅರ್ಜಿದಾರರುಗಳಿಗೆ ಅವರವರ ಹೆಸರಿಗೆ ವಿಪಿಸಿ ನಂಬರ್ ನೀಡಿ ಪಂಚಾಯತಿ ದಾಖಲೆಯಲ್ಲಿ ದಾಖಲಿಸಿರುವುದು ಕಾನೂನುಬಾಹಿರವಾಗಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಉದಪುಡಿ ಗ್ರಾಮದ ಸರ್ವೇ ನಂ.206/2ಪಿ ಸರ್ಕಾರಿ ಜಾಗವನ್ನು ಸರ್ಕಾರದ ಸುಪರ್ಧಿಗೆ ಪಡೆಯಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 2/3

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 03/03/17